ರಾತ್ರಿ ಉಂಡು ಬಸಲಿಂಗನ ಜೋಡಿನೇ ಮಕ್ಕಳ್ಳದ್ಕ ಹ್ವಾದೆ. ನಮ್ಮಿಬ್ಬರಿಗೆ ಹೊರಗಿನ ಅರಿವು ಕಾಣಲಿಲ್ಲ. ನಮ್ಮ ಅರಿವಿನ್ಯಾಗ ನಾವಿದ್ವಿ. ಒಂದೇ ಹಾಸಿಗ್ಯಾಗ ನಮ್ಮಿಬ್ಬರ ಯಾಡು ದೇಹಗಳು ಬಂದಿಯಾದ್ವು. ಅವನ ಉಸಿರಿನೊಂದಿಗೆ ಉಸಿರಾಡಿ. ಅವನ ಕಂಕುಳ ಬೆವರ ವಾಸನಿಗೆ ಪೂರ ಕಳೆದು ಹೋಗಿದ್ದೆ. ಸವ ರಾತ್ರಿ ಟೈಮಿನಲ್ಲಿ ನನಗೆ ಗೊತ್ತಿಲ್ಲದೆ ನಿದ್ದ್ಯಾಗ ಅವನ ತೋಳ ತೆಕ್ಕಿನೊಳಗೆ ಬಂದಿಯಾಗಿದ್ದು ಎಚ್ಚರವಾದಾಗಲೇ ತಿಳಿದಿತ್ತು.

ಇದಾದ ಘಳಿಗೆ ಬಳಿಕ ಹೊತ್ತು ಏರಿಂದಂತೆ ಮಾಮನ ಮನ್ಯಾಗ ಸಣ್ಣದಾಗಿ ಮಾತು ನಡದಿತ್ತು. ಬಸಲಿಂಗ ಕಳ್ಳತನ ಮಾಡಿದವನಂತೆ ಸಿಕ್ಕು ಅವರ ಬೈಗುಳಕ್ಕೆ ಬಲಿಯಾದವನಂತೆ ಕಂಡಿತು. ನನಗೆ ಯಾಕೆಂದು ಪಟ್ಟನೇ ತಿಳಿಲಿಲ್ಲ. ಮಾರನೇ ದಿನಾನೇ ಬಸಲಿಂಗ ದೂರದ ಊರಿಗೆ ನನ್ನಬಿಟ್ಟು ಓದಲಿಕ್ಕಂತ ಹೋದನು. ನನಗೆ ಒಂಟಿತನ ಕಾಡಕತ್ತಿತ್ತು. ಏನೋ ಕಳಕಂಡಂಗ ಮನಸ್ಸಿಗೆ ಅನಸ್ತಿತ್ತು. ಅವನ ಕಳಕಂಡ ಒಂಟಿತನ ಅವನಿಂದ ಕಲಿತ ಚಟಗಳು ನೀಗಿಸುತ್ತಿದ್ದವು. ಅವನ ನೆನಪುಗಳು ಕಾಡಿದಾಗ ಯಾರಿಲ್ಲದ ಟೈಮಿನಲ್ಲಿ ಬಚ್ಚಲ ಮನಿಗೆ ಹೋಗದು ರೂಢಿಯಾಗಿತ್ತು. ಮಕ್ಕಂಡಾಗ ತಲೆದಿಂಬು ಆಸ್ರ ಆಗಿತ್ತು. ರಾತ್ರಿ ಮಕ್ಕಂಡಾಗ ಜತಿಗಿ ಗೆಳೆಯನಿರಬೇಕೆಂದು ಮನಸ್ಸು ಚಡಪಡಿಸುತ್ತಿತ್ತು. ಬ್ಯಾರೆ ಗೆಳೆತನ ಬಯಸಿ ಬೆನ್ನತ್ತಿದ್ದರು ನನ್ನ ನಡವಳಿಕೆ ಅವರಿಗೆ ಹಿಡಿಸದೆ ಅಸಹ್ಯ ಅನ್ಸತ್ತಿತ್ತೋ ಹೆಂಗೋ ನನ್ನ ಕಂಡ್ರೆ ಸಾಕು, 'ಅವ ಸಿದ್ಲಿಂಗ ಪಾಡಿಲ್ರಲೇ, ಅವನ ಜತಿ ಕಟ್ಟಬ್ಯಾಡ್ರೀ, ಅವ್ನ ಚಟ ನಮಗ ಬರಾಂಗಾದ' ಎಂದು ಓಣ್ಯಾನ ವಾರಿಗಿ ಗೆಳೆಯರು ಒಬ್ಬರಿಗೊಬ್ಬರು ಮಾತ್ತಾಡಿ ನನ್ನ ಒಬ್ಬಂಟಿ ಮಾಡಿದರು. ಇದಾಗಿ ಬಾಳ್ ವರ್ಷಗಳು ಕಳದವು.

ಒಮ್ಮಿ ಇದ್ದಕ್ಕಿದ್ದಂತೆ ಬಸಲಿಂಗ ಹೆಣ್ತಿ ಜೊತಿ ತನ್ನ ಯಾಡು ಮಕ್ಕಳನ್ನ ಮುಂದು ಮಾಡಿಕೊಂಡು ಬಂದು ನನಗೆ ಬೆರಗು ಮೂಡಿಸಿದ್ದ. ಅವ್ನು ಮೊದಲಿನಂತೆ ಕಾಣಲಿಲ್ಲ. ಬದಲಿ ಮನುಷ್ಯ ಆಗಿದ್ದ. ಹಿಂತಿರುಗಿ ನೋಡಿದ್ರು ನೋಡದಂಗ ಮಾತ್ತಾಡ್ಸದೆ ಹ್ವಾದ. ಅವ್ನು ಮೊದಲಿನಂತೆ ಸಂಗಡ ಬಂದು ಕೂಡಲಿಲ್ಲ. ಮನಿ ಮುಂದು ಹ್ವಾದ್ರುನೂ ಮನ್ಯಾಗ ಅಡಿಗಿಕೊಳ್ಳುತ್ತಿದ್ದ. ಒಮ್ಮಿ ಗಪ್ಪ ಮನಿಯಿಂದ ಬೆಟ್ಟಿಯ್ಯಾಗಿ, 'ನೋಡ್



ಸಿದ್ಲಿಂಗ ಮೊದಲಿನ ಸುದ್ದಿ ಮೊದಲ ಮರತು ಬುಡು, ಈಗ ಅದು ಚೊಲಾಲ್ಲ. ಈಗ ಹೆಂಡ್ರು ಮಕ್ಕಳಾಗ್ಯಾರ' ಎಂದು ಹೇಳಿದವನೇ ತಡಾಗದೆ ಹ್ವಾದ. ನನಗೇನು ಹೇಳಲು ಆಗದೇ ಅವನನ್ನು ತಡೆಯಲು ಆಗದೇ ನನಗೆ ಪೂರ ಒಂಟಿತನ ಕಾಡಕತ್ತಿತ್ತು. ಹೀಗೆ ಸಹಜ ಆಗು ಹೋಗುಗಳ ಮಧ್ಯ ಜೀವನ ಕಳೆ ಕಳೆರದಾಗ ಮನಿ ಮಂದಿಯೆಲ್ಲ ಸೇರಿಕೇಸಿ ಹಳೆ ಸಂಬಂಧಿಕರ ಹುಡುಗಿಯನ್ನು ನೋಡಿಕೇಸಿ ಲಗ್ಗಣ ನಿಶ್ಚಯ ಮಾಡಿದ್ರು. ಹಿರಿಯರ ಮಾತಿಗೆ ಕಟ್ಟು ಬಿದ್ದು ನಿರವಿಲ್ಲೆಂದು ಲಗ್ಗಣ ಆದೆ.

* * *